ಚಿರಪರಿಚಿತವಾಗಿದ್ದ ಹೊಳೆಗೋಣಿ ರೂಪಾಂತರಗೊಂಡು ಅಪರಿಚಿತನಂತೆ ಕಂಡಿತ್ತಲ್ಲಾ... ಛೇ!... ಮನೆಗೆ ಬಂದಮೇಲೆ ತಂದೆಯಿಂದ ಗೊತ್ತಾಯ್ತು ಹೊಳೆಗೋಣಿಯಲ್ಲಿ ಆ ದಾರಿ ನಿರ್ಮಿಸಿ ಕೆಲವು ವರ್ಷಗಳೇ ಆಗಿಹೋಗಿವೆ ಅಂತ. ಊರಿಗೆ ಬಂದಾಗಲೆಲ್ಲಾ ಪೇಟೆ ಬೀದಿಗಳು, ದೇವಸ್ಥಾನ ಅಂತ ಸುತ್ತಾಡುತ್ತಿದ್ದೆನೇ ಹೊರತು ಹೊಳೆಗೋಣಿಯ ಕಡೆ ಹೋಗಿಯೇ ಇರಲಿಲ್ಲ. ದೇವಸ್ಥಾನದ ಹತ್ತಿರ ನಿಂತು ನೋಡಿದರೆ ಬಸ್ಸು, ಲಾರಿ ಇತ್ಯಾದಿ ವಾಹನಗಳು ಹೊಳೆ ನೀರಲ್ಲಿ ಮೈ ತೊಳೆಸಿಕೊಳ್ಳುವುದು ಕಾಣುತ್ತಿತ್ತು, ತುಂಗೆ ಮಲಿನವಾಗುತ್ತಿರುವುದು ಅರಿವಾಗುತ್ತಿತ್ತು. ಹೊಳೆಗೋಣಿ ಕಡೆ ಹೋಗಲು ಮನಸ್ಸಾಗದೇ ಹಾಗೇ ಬರುವಂತಾಗುತ್ತಿತ್ತು. ಆದರೆ ಈ ಬಾರಿ ಬಸ್ಸಿನ ದೆಸೆಯಿಂದ ಹೊಳೆಗೋಣಿ ನೋಡುವಂತಾಯಿತು.

ಊರಿನಲ್ಲಿ ಮುಖ್ಯಬೀದಿಯಷ್ಟೇ ಉದ್ದವಾಗಿರುವ, ತುಂಗೆಯ ಎಡಭಾಗದಲ್ಲಿ ವಿಸ್ತಾರವಾಗಿ ಚಾಚಿಕೊಂಡಿರುವ ಹೊಳೆಗೋಣಿ, ಸಣ್ಣವರಿದ್ದಾಗ ನಮಗಷ್ಟೇ ಅಲ್ಲದೆ ಊರಿನವರಿಗೆಲ್ಲಾ ಆಟದ ಮೈದಾನವಾಗಿತ್ತು. ಕಾಲೇಜ್, ಸ್ಕೂಲ್‌ಗಳ ಕ್ರೀಡಾದಿನಗಳಿಗೂ, ಊರವರ ಕ್ರಿಕೆಟ್, ಬ್ಯಾಡ್ಮಿಂಟನ್ ಆಟಗಳಿಗೆಲ್ಲಾ ಹೊಳೆಗೋಣಿಯೇ ಪ್ರಶಸ್ತ ಜಾಗವಾಗಿತ್ತು. ಊರಿನಲ್ಲಿ ಯಾವುದೇ ದೊಡ್ಡ ಕಾರ್ಯಕ್ರಮವಿರಲಿ ಇಲ್ಲೇ ನಡೆಯುವುದು – ಯಕ್ಷಗಾನ ಮೇಳಗಳು, ನಾಟಕ ಕಂಪೆನಿಗಳು, ದಸರಾ ಜಾತ್ರೆಯ ಸಮಯದಲ್ಲಿ ಬರುವ ತಿರುಗುವ ತೊಟ್ಟಿಲು, ಚುನಾವಣಾ ಪ್ರಚಾರ ಭಾಷಣಗಳ ವೇದಿಕೆ ಹೀಗೆ ಎಲ್ಲವೂ ಇಲ್ಲೇ ಬಿಡಾರ ಹೂಡುತ್ತಿದ್ದುದು. ಒಮ್ಮೆ ಯಾವುದೋ ಕಾರ್ಯಕ್ರಮ 'ಗಾಂಧಿಮೈದಾನ'ದಲ್ಲಿ ನಡೆಯಲಿದೆಯೆಂದು ಸುದ್ದಿಗಾರ ತಮಟೆ ಬಾರಿಸುತ್ತಾ ಊರ ಬೀದಿಯಲ್ಲಿ ಕೂಗುತ್ತಾ ಹೋಗುತ್ತಿದ್ದ. ನನಗೆ ತಿಳಿವಳಿಕೆ ಬಂದಮೇಲೆ ಅದೇ ಮೊದಲು ಗೊತ್ತಾಗಿದ್ದು ಹೊಳೆಗೋಣಿಗೆ 'ಗಾಂಧಿಮೈದಾನ' ಎಂಬ ಹೆಸರಿದೆ ಎಂದು. ಆದರೆ ನಮಗೆಲ್ಲ ಗಾಂಧಿಮೈದಾನ ಎಂಬ ಹೆಸರಿಗಿಂತ ಹೊಳೆಗೋಣಿ ಎಂಬುದೇ ಆಪ್ತವಾಗಿತ್ತು.

ಸಂಜೆ ನಾಲ್ಕೂವರೆಗೆ ಶಾಲೆ ಬಿಟ್ಟೊಡನೆ, ಮನೆಗೆ ಬಂದು ಕೈಕಾಲು ತೊಳೆದು, ಹಿರಿಯರು ಕೊಟ್ಟ ತಿಂಡಿಯನ್ನು ಮುಕ್ಕಿ, ಆಟಕ್ಕೆಂದು ಓಡುವುದು ಹೊಳೆಗೋಣಿಯ ಕಡೆಗೇ. ಎಲ್ಲಾ ಸ್ನೇಹಿತೆಯರು ಸೇರಿ ಜೂಟಾಟ, ಖೋ ಖೋ, ಟೆನಿಕಾಯ್ಟ್ ಆಟಗಳನ್ನು ಆಡುವುದೆಂದರೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ಓಡುತ್ತಾ ಬಿದ್ದು ಮೊಣಕಾಲು ಗಾಯವಾಗಿ, ಆ ಸಣ್ಣದೊಂದು ಗಾಯಕ್ಕೆ ವಾರಗಟ್ಟಲೆ ದೊಡ್ಡದೊಂದು ಪ್ಲಾಸ್ಟರ್ ಹಾಕಿ ದೊಡ್ಡ ಗಾಯವೆಂಬಂತೆ ಪೋಸ್ ಕೊಟ್ಟಿದ್ದು – ಇವೆಲ್ಲಾ ನೆನಪುಗಳು ಈಗ ಮುಗುಳುನಗೆ ಮೂಡಿಸುತ್ತವೆ. ಆಗೆಲ್ಲಾ 'ಚಂದಮಾಮ' ಪತ್ರಿಕೆಯಲ್ಲಿ ಎನರ್ಜಿ ಟ್ಯಾಬ್ಲೆಟ್ ಎಂಬುದರ ಜಾಹೀರಾತು ಬರುತ್ತಿತ್ತು. ಅದನ್ನು ಬಾಯಿಯಲ್ಲಿಟ್ಟುಕೊಂಡ ಬಾಲಕ ವೇಗವಾಗಿ ಓಡಿ ಕಳ್ಳರನ್ನು ಹಿಡಿಯುತ್ತಾನೆ, ಆತನನ್ನು ಎಲ್ಲರೂ ಹೊಗಳುತ್ತಾರೆ. ನಮ್ಮ ಮನೆಯಲ್ಲೂ ನನ್ನ ತಂದೆ ಎಲ್ಲಿಂದಲೋ ಎನರ್ಜಿ ಟ್ಯಾಬ್ಲೆಟ್‌ಗಳನ್ನು ತಂದಿಟ್ಟಿದ್ದರು. ತೆಳು ಹಳದಿಯ, ಮೊಟ್ಟೆಯಾಕಾರದ, ಆಕರ್ಷಕ ಪರಿಮಳವಿರುವ ಸಣ್ಣ ಮಾತ್ರೆಗಳು. ನಾನು ಆಟಕ್ಕೆ ಹೋಗುವಾಗಲೆಲ್ಲ ಅದನ್ನು ಬಾಯಿಯಲ್ಲಿಟ್ಟುಕೊಂಡು ಹೋಗುತ್ತಿದ್ದೆ. ಓಡುವುದರಲ್ಲಿ ನಾನೇ ಮೊದಲಿಗಳಾದಾಗ, ಹೆಮ್ಮೆಯಿಂದ ನನ್ನ ಬಾಯಿಯಲ್ಲಿದ್ದ ಎನರ್ಜಿ ಟ್ಯಾಬ್ಲೆಟ್ ತೋರಿಸುತ್ತಿದ್ದೆ. ಗೆಳತಿಯರು ಎಲ್ಲಿ ಸಿಕ್ಕಿತೇ ಎಂದು ಕೇಳಿದರೂ ಗುಟ್ಟು ಬಿಟ್ಟುಕೊಡುತ್ತಿರಲಿಲ್ಲ. ಆದರೆ ತಡವಾಗಿ ತಿಳಿದಿದ್ದು ಎನರ್ಜಿ ಟ್ಯಾಬ್ಲೆಟ್ ಕೂಡ ಸಾಧಾರಣ ಪೆಪ್ಪರ್‌ಮೆಂಟ್ ತರಹವೇ ಎಂದು.